| Publication: PRAJAVANI | Date : 3.12.2009<br>Page: 3 | Subject: Flags of Honour |
|---|---|---|


# ಹುತಾತ್ಮ ವೀರಯೋಧರಿಗೆ ಸಂಗೀತದ ನಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರ ರಕ್ಷಣೆ ಕಾರ್ಯಕ್ಕೆ ತಮ್ಮನ್ನು ತಾವು ಸಮರ್ಪಿಸಿಕೊಂಡು ಹುತಾತ್ಮರಾದ ವೀರ ಯೋಧರಿಗೆ ಸಂಗೀತದ ಮೂಲಕ ನಮನ ಸಲ್ಲಿಸುವ ಅಪೂರ್ವ ಕಾರ್ಯಕ್ರಮ ನಗರದಲ್ಲಿ ಶನಿವಾರ ನಡೆಯಿತು. ಸುಮಾರು 17 ಮಂದಿ ವಿದ್ವಾಂಸರು ಸಂಗೀತ ಸುಧೆ ಹರಿಸಿ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ವಸಂತರತ್ನ ಕಲಾ ಪ್ರತಿಷ್ಠಾನವು ಮೂರನೇ ವಾರ್ಷಿಕೋತ್ಸವದ ಅಂಗವಾಗಿ ನಗರದ ವೈಯಾಲಿ ಕಾವಲ್‌ನಲ್ಲಿರುವ ಚೌಡಯ್ಯ ಸ್ಮಾರಕ ಭವನದಲ್ಲಿ 'ಸೆಲ್ಯೂಟ್ ಟು ಹೀರೋಸ್' ಕಾರ್ಯಕ್ರಮ ಹಮ್ಮಿಕೊಂಡಿತ್ತು. ತಬಲ, ಘಟ, ಚಂಡೆ, ಮೋರ್ಚಿಂಗ್, ಕೊಳಲು, ವಯಲಿನ್, ಡ್ರಮ್... ಇತರ ವಾದ್ಯಗಳ ಮೂಲಕ ಹೊರಹೊಮ್ಮಿದ ಸಂಗೀತ ನೆರೆದ ಪ್ರೇಕ್ಷಕರನ್ನು ಮೂಕವಿಸ್ಮಿತರನ್ನಾಗಿಸಿತ್ತು. ಸಾಲಾಗಿ ಕುಳಿತ ವಿದ್ವಾಂಸರು ಪೈಪೋಟಿಗೆ ಬಿದ್ದವರಂತೆ ತಮ್ಮ ಪಾಂಡಿತ್ಯ ಪ್ರದರ್ಶಿಸಿ ಸಂಗೀತ ಲೋಕವನ್ನೇ ಸೃಷ್ಟಿಸಿದರು.

'ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್' (ಎಂಇಜಿ)ನ ಪಿ.ಕಥಾವರನ್ ನೇತೃತ್ವದ ಬ್ಯಾಂಡ್ ತಂಡದವರು ಸುಶ್ರಾವ್ಯವಾಗಿ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಇದಕ್ಕೂ ಮೊದಲು ಹುತಾತ್ಮರ ಮಕ್ಕಳಿಗೆ ವಿದ್ಯಾರ್ಥಿವೇತನ ನೀಡುವ ಕಾರ್ಯಕ್ರಮಕ್ಕೆ ರಾಜ್ಯಪಾಲ ಎಚ್.ಆರ್. ಭಾರದ್ವಾಜ್ ಅವರು ಚಾಲನೆ ನೀಡಿದರು. ಕೆ.ಅರ್ಪಿತಾ, ಕೆ.ಅಖಿಲಾ ಹಾಗೂ ರೊನಾಲ್ಡ್ ರಾಜ್ ಎಂಬ ವಿದ್ಯಾರ್ಥಿಗಳಿಗೆ ಅವರು ಸಾಂಕೇತಿಕವಾಗಿ ವಿದ್ಯಾರ್ಥಿ ವೇತನ ನೀಡಿದರು.

ಬಳಿಕ ಮಾತನಾಡಿದ ರಾಜ್ಯಪಾಲರು, 'ರಾಷ್ಟ್ರ ರಕ್ಷಣಾ ಕಾರ್ಯಕ್ಕೆ ತೊಡಗಿಸಿಕೊಂಡ ಯೋಧರ ಕುಟುಂಬಗಳಿಗೆ ಸೂಕ್ತ ರಕ್ಷಣೆ ಹಾಗೂ ಸೌಲಭ್ಯ ಕಲ್ಪಿಸುವುದು ಸರ್ಕಾರ ಹಾಗೂ ನಾಗರಿಕ ಸಮಾಜದ ಹೊಣೆ. ಹುತಾತ್ಮರಾದ ಯೋಧರಿಗೆ ಸಂಗೀತದ ಮೂಲಕ ನಮನ ಸಲ್ಲಿಸುತ್ತಿರುವ ಪ್ರತಿಷ್ಠಾನದ ಕಾರ್ಯ ಶ್ಲಾಘನೀಯ' ಎಂದರು.

ರಾಷ್ಟ್ರೀಯತೆ ಕುರಿತ ನಾಟಕೋತ್ಸವದಲ್ಲಿ ಬಹುಮಾನ ಗಳಿಸಿದ ಸೇನಾ ಪಬ್ಲಿಕ್ ಶಾಲೆ (ಪ್ರಥಮ), ಪೂರ್ಣಪ್ರಜ್ಞಾ ಶಾಲೆ (ದ್ವಿತೀಯ) ಹಾಗೂ ಬಿಷಪ್ ಕಾಟನ್ ಬಾಲಕರ ಶಾಲೆ (ತೃತೀಯ)ಯ ವಿದ್ಯಾರ್ಥಿಗಳಿಗೆ ಕ್ರಮವಾಗಿ ರೂ 20,000, ರೂ 15,000 ಹಾಗೂ 10 ಸಾವಿರ ರೂಪಾಯಿ ನಗದು ಬಹುಮಾನವನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೀಡಿದರು.

ನಂತರ ಮಾತನಾಡಿದ ಯಡಿಯೂರಪ್ಪ, 'ನಮ್ಮ ಉತ್ತಮ ನಾಳೆಗಳಿಗಾಗಿ ತಮ್ಮ ಜೀವವನ್ನೇ ತ್ಯಾಗ ಮಾಡುವ ಯೋಧರ ಕುಟುಂಬಗಳಿಗೆ ಸಕಲ ಸೌಲಭ್ಯ ಕಲ್ಪಿಸಲು ಸರ್ಕಾರ ಬದ್ಧವಾಗಿದೆ. ಯೋಧರಿಗೆ ನಮನ ಸಲ್ಲಿಸುವ ಈ ಕಾರ್ಯಕ್ರಮ ನಿಜಕ್ಕೂ ಅರ್ಥಪೂರ್ಣ' ಎಂದರು.

ರಾಜ್ಯಸಭಾ ಸದಸ್ಯ ರಾಜೀವ್ ಚಂದ್ರಶೇಖರ್, ಪ್ರತಿಷ್ಠಾನದ ಸ್ಥಾಪಕ ನಿರ್ದೇಶಕಿ ಸುಭಾಷಿಣಿ ವಸಂತ್, ಪ್ರಫುಲ್ಲತಾ ಭಾರದ್ವಾಜ್ ಇತರರು ಉಪಸ್ಥಿತರಿದ್ದರು.